KACD420000502024

**ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ**

**ಸಿ.ಸಿ. ನಂಃ 15/2024**

ಫಿರ್ಯಾದಿ : ಸರ್ಕಾರದ ಪರವಾಗಿ – ಚಿಕ್ಕಜಾಜೂರು ಪೋಲೀಸರು.

– ವಿರುದ್ಧ –

ಆರೋಪಿತರುಃ 1. ಮೋಹನ್ ಕುಮಾರ ಮತ್ತು ಇತರರು.

**–:: ದೋ ಷಾ ರೋ ಪ ಣೆ ::**

ಶ್ರೀ ಉಮೇಶ, ಬಿ.ಎ.ಎಲ್., ಎಲ್ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,

ಹೊಳಲ್ಕೆರೆ ಆದ ನಾನು

ಆರೋಪಿತರುಃ 1. ಮೋಹನ್ ಕುಮಾರ ಬಿನ್ ವೀರಭದ್ರಪ್ಪ ,
ವಯಸ್ಸುಃ 34 ವರ್ಷಗಳು, ವೃತ್ತಿಃ ವ್ಯವಸಾಯ,
ವಾಸಃ ಬಿ.ದುರ್ಗ ಗ್ರಾಮ, ಹೊಳಲ್ಕೆರೆ ತಾಲ್ಲೂಕು.

2. ವೀರಭದ್ರಪ್ಪ ಬಿನ್ ವೀರಭದ್ರಪ್ಪ ,
ವಯಸ್ಸುಃ 32 ವರ್ಷ, ವೃತ್ತಿಃ ವ್ಯವಸಾಯ,
ವಾಸಃ ಬಿ.ದುರ್ಗ ಗ್ರಾಮ, ಹೊಳಲ್ಕೆರೆ ತಾಲ್ಲೂಕು.

3. ರಘು ಬಿನ್ ಮಹಂತೇಶ ,
ವಯಸ್ಸುಃ 24 ವರ್ಷ, ವೃತ್ತಿಃ ವ್ಯವಸಾಯ,
ವಾಸಃ ಆಡನೂರು ಗ್ರಾಮ, ಹೊಳಲ್ಕೆರೆ ತಾಲ್ಲೂಕು.

4. ಮಂಜಪ್ಪ ಬಿನ್ ಕಲಿವೀರಪ್ಪ
ವಯಸ್ಸುಃ 50 ವರ್ಷಗಳು, ವೃತ್ತಿಃ ವ್ಯವಸಾಯ,
ವಾಸಃ ಕೊಹಟಿಗೆರೆ ಗ್ರಾಮ, ಚನ್ನಗಿರಿ ತಾಲ್ಲೂಕು.

5. ಶ್ರೀಮತಿ ವಿಶಲಾಕ್ಷಮ್ಮ ಕೋಂ ಮಂಜಪ್ಪ ,

ವಯಸ್ಸುಃ 42 ವರ್ಷಗಳು, ವೃತ್ತಿಃ ಮನೆಕೆಲಸ ,
ವಾಸಃ ಕೊರಟಿಗೆರೆ ಗ್ರಾಮ, ಚನ್ನಗಿರಿ ತಾಲ್ಲೂಕು.

6. ಬೈರೇಶ ಬಿನ್ ಕುಮಾರಪ್ಪ ,
ವಯಸ್ಸುಃ 35 ವರ್ಷಗಳು, ವೃತ್ತಿಃ ವ್ಯವಸಾಯ ,
ವಾಸಃ ದುಮ್ಮಿ ಗ್ರಾಮ, ಹೊಳಲ್ಕೆರೆ ತಾಲ್ಲೂಕು.

7. ಶ್ರೀಮತಿ ಮಂಜುಳಮ್ಮ ಕೋಂ ಕುಮಾರಪ್ಪ ,
ವಯಸ್ಸುಃ 52 ವರ್ಷಗಳು, ವೃತ್ತಿಃ ಮನೆಕೆಲಸ ,
ವಾಸಃ ದುಮ್ಮಿ ಗ್ರಾಮ, ಹೊಳಲ್ಕೆರೆ ತಾಲ್ಲೂಕು.

8. ಶ್ರೀಮತಿ ಸುಶೀಲಮ್ಮ ಕೋಂ ಮಹಂತೇಶಪ್ಪ ,
ವಯಸ್ಸುಃ 50 ವರ್ಷ, ವೃತ್ತಿಃ ಮನೆಕೆಲಸ,
ವಾಸಃ ಆಡನೂರು ಗ್ರಾಮ, ಹೊಳಲ್ಕೆರೆ ತಾಲ್ಲೂಕು.

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿಃ 29-09-2023 ರಂದು ಬೆಳಗ್ಗೆ 9-00 ರ ಸಮಯದಲ್ಲಿ ಚಿಕ್ಕಜಾಜೂರು ಪೋಲೀಸ್ ಠಾಣಾ ವ್ಯಾಪ್ತಿಯ ಹೊಳಲ್ಕೆರೆ ತಾಲ್ಲೂಕು,ಬಿ.ದುರ್ಗ ಗ್ರಾಮದ ಬಸವಲಿಂಗಪ್ಪರವರ ಜಮೀನಿನ ಪಕ್ಕದಲ್ಲಿ ಹಾದು ಹೋಗಿರುವ ಹೊಳಲ್ಕೆರೆ - ದಾವಣಗೆರೆ ಟಾರು ರಸ್ತೆಯ ಪಕ್ಕದ ಕಚ್ಚಾ ಮಣ್ಣಿನ ರಸ್ತೆಯ ಮೇಲೆ ಚಾಸಾ-1 , ಚಾಸಾ-4 ಮತ್ತು ಚಾಸಾ-5 ರವರು ನಿಂತುಕೊಂಡಿರುವಾಗ , ಚಾಸಾ-1 ಮತ್ತು ಚಾಸಾ-5 ರವರು ಅಡಿಕೆ ತೋಟ ಖೇಣಿ ಮಾಡಿಕೊಂಡು ಅಡಿಕೆ ಕೆಡವಲು ಬಂದಿದ್ದ ವಿಚಾರವಾಗಿ, ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೋದ್ದೇಶದಿಂದ ಸಾಕ್ಷಿ-1 ರವರ ಮೇಲೆ ಅಕ್ರಮಗುಂಪುಕಟ್ಟಿಕೊಂಡು ಬಂದಿರುತ್ತೀರಿ ಆ ಮೂಲಕ ನೀವು ಭಾ.ದಂ.ಸಂ. ಕಲಂ 143 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೋದ್ದೇಶದಿಂದ ಅಕ್ರಮಗುಂಪುಕಟ್ಟಿಕೊಂಡು ಬಂದು ಅದರ

ಸದಸ್ಯರುಗಳಾಗಿರುತ್ತೀರಿ. ಆ ಮೂಲಕ ನೀವು ಭಾ.ದಂ.ಸಂ. ಕಲಂ 147 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೋದ್ದೇಶದಿಂದ ಅಕ್ರಮಗುಂಪುಕಟ್ಟಿಕೊಂಡು ಕೈಗಳಲ್ಲಿ ಮಾರಾಕಾಸ್ತ್ರಗಳಾದ ಕಲ್ಲುಗಳನ್ನು ಹಿಡಿದುಕೊಂಡು ಬಂದು ಫಿರ್ಯಾದಿದಾರರ ಮೇಲೆ ದೊಂಬಿ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾ.ದಂ.ಪ್ರ.ಸಂ. ಕಲಂ 148 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೋದ್ದೇಶದಿಂದ ಅಕ್ರಮಗುಂಪುಕಟ್ಟಿಕೊಂಡು ಬಂದು ಚಾಸಾ-1 ರವರಿಗೆ ನೀನು ಏಕೆ ಅಡಿಕೆ ಕೆಡವಲು ಬಂದಿದ್ದೀಯಾ ಎಂದು ಕೇಳಿದ್ದಕ್ಕೆ ಚಾಸಾ-1 ರವರು ಅಕ್ಕ ನಾಗರತ್ನಮ್ಮ ಖೇಣಿ ಕೊಟ್ಟಿರುತ್ತಾರೆ ಅದಕ್ಕೆ ಅಡಿಕೆ ಕೆಡವಲು ಬಂದಿದ್ದೆ ಎಂದು ಹೇಳುತ್ತಿದ್ದಂತೆ , 1 ಮತ್ತು 2 ನೇ ಆರೋಪಿತರಾದ ನೀವಿಬ್ಬರೂ ಚಾಸಾ-1 ರವರಿಗೆ ಸೂಳೇಮಗನೆ , ಬೋಳಿಮಗನೆ ನೀನು ಈ ತೋಟದಲ್ಲಿ ಅಡಿಕೆ ಕೆಡುವುವಂತಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವೆಲ್ಲರೂ ಭಾ.ದಂ.ಸಂ. ಕಲಂ 504 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೋದ್ದೇಶದಿಂದ ಅಕ್ರಮಗುಂಪುಕಟ್ಟಿಕೊಂಡು ತಮ್ಮ ಕೈ ಕಾಲುಗಳಿಂದ ಚಾಸಾ-1 ರವರ ಮೈ ಕೈಗೆ ಹೊಡೆದು, 5 ನೇ ಆರೋಪಿಯು ಚಾಸಾ-1 ರವರ ಎಡಕೈಗೆ ಹಲ್ಲಿನಿಂದ ಕಚ್ಚಿ, ಜಗಳ ಬಿಡಿಸಲು ಬಂದ ಚಾಸಾ-4 ಮತ್ತು ಚಾಸಾ-5 ರವರಿಗೂ ಸಹ ಆರೋಪಿತರಾದ ನೀವೆಲ್ಲರೂ ಚಾಸಾ-4 ಮತ್ತು ಚಾಸಾ-5 ರವರ ಮೈ ಕೈಗೆ ಕೈ ಕಾಲುಗಳಿಂದ ಹೊಡೆದು, 1 ನೇ

ಆರೋಪಿತನು ಚಾಸಾ–4 ರವರ ಬಲಕಾಲಿನ ತೊಡೆಗೆ ಹಲ್ಲಿನಿಂದ ಕಚ್ಚಿ , ಚಾಸಾ–1 ಮತ್ತು ಚಾಸಾ–4 ರವರಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 323 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ಆರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೋದ್ದೇಶದಿಂದ ನಿಮ್ಮಲ್ಲಿಯ 1 ನೇ ಆರೋಪಿಯು ಕಲ್ಲಿನಿಂದ ಚಾಸಾ–1 ರವರ ಬಾಯಿಗೆ ಗುದ್ದಿ , 2 ನೇ ಆರೋಪಿಯು ಕಲ್ಲಿನಿಂದ ಚಾಸಾ–1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾ.ದಂ.ಪ್ರ.ಸಂ. ಕಲಂ 324 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೋದ್ದೇಶದಿಂದ ಚಾಸಾ–1, ಚಾಸಾ–4 ಮತ್ತು ಚಾಸಾ–5 ರವರಿಗೆ ಇನ್ನೊಮ್ಮೆ ಈ ತೋಟದಲ್ಲಿ ಅಡಿಕೆ ಕೆಡವಲು ಬಂದರೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿ ಭಯನ್ನುಟ್ಟಿಸಿರುತ್ತೀರಿ. ಆ ಮೂಲಕ ಆರೋಪಿತರಾದ ನೀವೆಲ್ಲರೂ ಭಾ.ದಂ.ಪ್ರ.ಸಂ. ಕಲಂ 506 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರತ್ತದೆ.

ನೀವು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಸಿವಿಲ್ ನ್ಯಾಯಾಧೀಶರು ಮತ್ತು

**ದಿ:09–07–2024** ಜೆ ಎಂ ಎಫ್ ಸಿ, ಹೊಳಲ್ಕೆರೆ.